ಯಾಕೋ ತುಂಬಾ ಹತ್ತಿರದವಳು ಎನಿಸಿ ಇಲ್ಲಿಯೇ ಕರೆದುಕೊಂಡು ಬಂದಿದ್ದೇನೆ' ಎಂದಳು.

ನಿಜಕ್ಕೂ ಸೇವಂತಿಯಕ್ಕನಂಥವರು ಸಿಗುವುದು ಅಪರೂಪ ಅಲ್ಲವೇ ಕೆಂಚಕ್ಕ? ಈಗ ಸೇವಂತಿಯಕ್ಕನ ಮಗಳನ್ನು ಯಾರು ಮದುವೆ ಆಗುವರು? ಅವಳಿಗೊಂದು ಉದ್ಯೋಗ ನಾನು ನೋಡುತ್ತೇನೆ. ಮದುವೆ ಬಗ್ಗೆ ನೀನು ಎಲ್ಲಾದರೂ ಒಳ್ಳೆ ಹುಡುಗ ಇರುವನಾ ಎಂದು, ಆಮೇಲೆ ನಿಧಾನಕ್ಕೆ ವಿಚಾರಿಸು. ಈಗ ಸಮಯ ಆಗಲೇ ಒಂಬತ್ತರ ಗಡಿ ದಾಟಿದೆ. ಮನೆಗೆ ಹೊರಡುತ್ತೇನೆ. ಸೇವಂತಿ ಅಕ್ಕ ಬಂದ ಮೇಲೆ ಬರುವೆ'ಎಂದು ಹೇಳಿ ಮನೆ ದಾರಿ ಹಿಡಿದೆ.

ಎರಡು ದಿನದ ಒಳಗೆ ಸೇವಂತಿಯಕ್ಕ ಕಾಣಿಸಿದಳು. ಕೆಲಸಕ್ಕೆ ಹೋಗಿರಲಿಲ್ಲ ಎಂದೆನಿಸಿತು. ಕೆಂಚಕ್ಕನೂ ಹೋಗಿರಲಿಲ್ಲ. 'ಏನು ಸಮಾಚಾರ ಇಬ್ರೂ ಮನೆಯಲ್ಲಿಯೇ ಇದ್ದೀರಲ್ಲಾ' ಎಂದೆ. ಸೇವಂತಿ ಅಕ್ಕ, 'ನಾನು ನನ್ನ ಮಗಳನ್ನು ನೋಡಲು ಹೋಗಿದ್ದೆ. ಹೋದ ಮೇಲೆ ಯಾಕೆ ಹೋದೆ ಎಂದೆನಿಸಿತು ಅಲ್ಲಿ ಒಂದು ಸಮಸ್ಯೆ ಆಗಿದೆ' ಎಂದು ನಿಟ್ಟುಸಿರು ಬಿಟ್ಟಳು.

'ಏನಾಯ್ತು ಅಕ್ಕ' ಎಂದೆ.

'ಏನು ಹೇಳಲಿ ನನ್ನ ಮಗಳು ಚೆನ್ನಾಗಿ ಓದಿ, ನೌಕರಿ ಮಾಡಲಿ, ಅವಳ ಬದುಕು ಹಸನಾಗಿರಲಿ ಎಂದು ಆಸೆ ಪಟ್ಟೆ. ಅದು ತಪ್ಪೇನವ್ವಾ' ಎಂದಳು. 'ತಪ್ಪಲ್ಲ' ಎಂದೆ.

'ಈಗ ಸಮಸ್ಯೆ ಏನಾಗಿರಬಹುದು? ಅವಳೇನಾದರೂ ಪರೀಕ್ಷೆಯಲ್ಲಿ ಫೇಲಾಗಿದ್ದಳಾ' ಎಂದೆ.

'ಇಲ್ಲ ಯವ್ವಾ... ಓದು-ಬರಹ ಬಿಟ್ಟು, ಅವಳು ಒಂದು ಹುಡುಗನನ್ನು ಪ್ರೀತಿಸ್ತಾ ಇದ್ದಾಳಂತೆ. ಅವನು ಇವಳನ್ನು ಅಷ್ಟೇ ಪ್ರೀತಿಸ್ತಾನಂತೆ. ನಾನು ಬಂದ ಸುದ್ದಿ ಕೇಳಿ, ಆ ಹುಡುಗ ನನ್ನನ್ನು ನೋಡಲು ಬಂದ. ಬಂದವನೇ ಆದಷ್ಟು ಬೇಗ ಮದುವೆಗೆ ಸಿದ್ಧತೆ ಮಾಡಿಕೊಳ್ಳುವೆ ಅಮ್ಮಾ. ನೀವು ಏನೂ ಚಿಂತೆ ಮಾಡಬೇಡಿ, ನಾನು ಗೌಡರ ವಂಶದವನು. ಮಾತಿಗೆ ತಪ್ಪುವುದಿಲ್ಲ. ನಾನು ಒಬ್ಬನೇ ಮಗ. ದೊಡ್ಡ ಜಮೀನ್ದಾರರು ನಾವು. ನಾನು ಒಳ್ಳೆಯ ಹುಡುಗ ಇದುವರೆಗೂ ಯಾವ ಹುಡುಗಿಯನ್ನು ಕಣ್ಣೆತ್ತಿಯೂ ನೋಡಿಲ್ಲ ನಿಮ್ಮ ಮಗಳನ್ನು ಬಿಟ್ಟು. ಇಡೀ ಕಾಲೇಜಿಗೆ ಗೊತ್ತು, ನಿಮ್ಮ ಸಂಪಕಾಳಿಗೆ ಗೊತ್ತು. ನಾನು ಮೋಸ ಮಾಡುವವನಲ್ಲ. ಮನಸಾರೆ ಪ್ರೀತಿಸುವವಳನ್ನು ಕೊನೆಯವರೆಗೂ ಕೈಹಿಡಿದು ನಡೆಸುವೆ. ನಮ್ಮ ಪ್ರೀತಿಯನ್ನು ದೂರ ಮಾಡಬೇಡಿ' ಎಂದು ಕಾಲಿಗೆ ಬಿದ್ದನು.

ಒಂಥರಾ ವಾತ್ಸಲ್ಯ, ಮಮಕಾರ ಉಕ್ಕಿ ಬಂದು ಅವನನ್ನು ಕೈ ಹಿಡಿದು ಮೇಲೆತ್ತಿ, 'ಏನು ಮಾಡುತ್ತಿದ್ದೀ ಮಗು' ಎಂದೆ. ಅವನು 'ಅಮ್ಮಾ' ಎಂದ. ನನ್ನ ಕರುಳು ಚುರುಕು ಎಂದಿತು. 'ಆಯ್ತು, ನಿನ್ನಾಸೆಯಂತೆಯೇ ಆಗಲಿ' ಎಂದು ಸುಮ್ಮನಾದೆ. ಆ ಹುಡುಗನಿಗೆ ಏನೂ ಅನ್ನಲು ಮನಸ್ಸಾಗಲಿಲ್ಲ.

'ಸರಿ ನಿಮ್ಮ ತಂದೆತಾಯಿ ಒಪ್ಪಬೇಕಲ್ಲವೇ?' ಎಂದೆ.

' ನನಗೆ ತಾಯಿಯಿಲ್ಲ. ತಂದೆ ಇದ್ದರೂ ಇಲ್ಲದಂತೆ, ಮಗ ಅನ್ನೋ ಮಮಕಾರ ಇಲ್ಲ ಅವರಿಗೆ. ಅವರ ಬಗ್ಗೆ ನಾನು ಏನು ಹೇಳುವುದಿಲ್ಲ, ಅವರ ಕುರಿತು ಯೋಚಿಸುವುದೂ ಇಲ್ಲ. ನೀವು ಯೋಚಿಸಬೇಡಿ' ಎಂದು ಹೇಳಿದ.

'ದಯವಿಟ್ಟು ನನ್ನ ಮೇಲೆ ನಂಬಿಕೆ ಇಡಿ ಅಮ್ಮಾ' ಎಂದನು. ಅವನ ಮುಖದಲ್ಲಿನ ದೈನ್ಯತೆಯ ಭಾವ ಕೊನೆಯದಾಗಿ ವೆಂಕಟಪ್ಪ ಗೌಡನ ಮುಖದಲ್ಲಿ ಕಂಡ ದೈನ್ಯತೆಯ ಭಾವದಂತೆ ಇತ್ತು .ಅದಕ್ಕೆ ಒಪ್ಪಿಗೆ ಸೂಚಿಸಿ ಬಂದೆ' ಎಂದು ನಮ್ಮ ಕಡೆ ತಿರುಗಿ ಹೇಳಿದಳು.

'ನಾನು ಮದುವೆಗೆ ಒಪ್ಪಿಗೆ ಕೊಟ್ಟದ್ದು ತಪ್ಪಾಯಿತೇ?' ಎಂದು ನಮ್ಮ ಕಡೆ ನೋಡಿದಳು.

ಅವಳ ಮುಖದಲ್ಲಿ ಸಾವಿರ ದ್ವಂದ್ವ, ಏನೋ ಸರಿಯಾಗಿಲ್ಲ ಎನ್ನುವ ಕಸಿವಿಸಿ. ಕೆಂಚಕ್ಕ ನನಗೆ ಸನ್ನೆ ಮಾಡಿ ಅವಳಿಗೆ ಪ್ರತಿಕ್ರಿಯೆ ನೀಡಲು ಮುಂದಾದಳು.

'ಹಾಗೇನೂ ಇಲ್ಲ ಸೇವಂತಿ... ಆಗೋದೆಲ್ಲಾ ಒಳ್ಳೆಯದಕ್ಕೆ. ಹುಡುಗ ಬುದ್ಧಿವಂತ. ಓದಿಕೊಂಡಿರುವವನು, ಗುಣವಂತ. ಮೇಲಾಗಿ ಪ್ರೀತಿಸಿ ಮದುವೆಯಾಗುತ್ತಿದ್ದಾನೆ. ಹೀಗಿರುವಾಗ ಸಂಪಕಾಳನ್ನು ಚೆನ್ನಾಗೇ ನೋಡಿಕೊಳ್ಳುವನು. ಸುಮ್ಮನೆ ಏನೇನೊ ತಲೆಗೆ ಹಾಕಿಕೊಳ್ಳಬೇಡ' ಎಂದು ಅವಳಿಗೆ ಸಮಾಧಾನ ಪಡಿಸಿದಳು.

ಮೂವರಲ್ಲೂ ಒಂದು ನಿರಾಳ ಭಾವ ಬಂದಿತು. ಇದಾದ ಒಂದು ವಾರಕ್ಕೆ ಮದುವೆಯ ಕೆಲಸಗಳಿಗೆ ನಾನು ನೆರವಾಗತೊಡಗಿದೆ. ಮದುಮಗಳಿಗೆ